# 2014-15 ನೇ ಸಾಲಿನ ಮಾನವ ಸಂಪನ್ಮೂಲ ಅಭಿವೃದ್ಧಿ (HRD) ಮಾರ್ಗಸೂಚಿ

## 1. ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು:

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿಗಾಗಿ, ಉತ್ತಮ ಗುಣಮಟ್ಟದ ಕಸಿ / ಸಸಿ ಗಿಡಗಳ ಉತ್ಪಾದನೆ, ಬಿತ್ತನೆ ಬೀಜಗಳ ಉತ್ಪಾದನೆ, ಪ್ರದೇಶ ವಿಸ್ತರಣೆ ಕಾರ್ಯಕ್ರಮ, ಹಳೆ ತೋಟಗಳ ಉತ್ಪಾದಕತೆ ಹೆಚ್ಚಿಸಲು ಪುನ:ಶ್ಚೇತನ ಕಾರ್ಯಕ್ರಮ, ಸಮಗ್ರ ಪೀಡೆ / ಪೋಷಕಾಂಶ ನಿರ್ವಹಣೆ, ಸಂರಕ್ಷಿತ ಬೇಸಾಯ, ನೀರು ಸಂಗ್ರಹಣೆ ಮತ್ತು ನಿರ್ವಹಣೆ, ಯಾಂತ್ರೀಕರಣ, ತೋಟಗಾರಿಕೆ ಬೆಳೆಗಳ ಪರಾಗಸ್ಪರ್ಶತೆ ಹೆಚ್ಚಿಸಲು ಜೇನು ಸಾಕಾಣಿಕೆ, ಕೊಯ್ಲೋತ್ತರ ನಿರ್ವಹಣೆ, ಮಾರುಕಟ್ಟೆ ಅಭಿವೃದ್ಧಿ ಇತ್ಯಾದಿ ಕಾರ್ಯಕ್ರಮಗಳನ್ನು ಈ ಯೋಜನೆಯಡಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ವಿಷಯಗಳ ಕುರಿತು ಆಧುನಿಕ ತಾಂತ್ರಿಕತೆ ಮತ್ತು ಅಭಿವೃದ್ಧಿಯ ಬಗ್ಗೆ ಇಲಾಖಾ ಅಧಿಕಾರಿಗಳು ಮತ್ತು ರೈತರಲ್ಲಿ ಅರಿವು ಮೂಡಿಸಲು ತರಬೇತಿ ಕಾರ್ಯಕ್ರಮಗಳು, ಒಳರಾಜ್ಯ ಮತ್ತು ಹೊರರಾಜ್ಯ ಹಾಗೂ ವಿದೇಶಗಳಲ್ಲಿ ಅಧ್ಯಯನ ಪ್ರವಾಸಗಳನ್ನು ಏರ್ಪಡಿಸಲಾಗುತ್ತಿದೆ.

## 2. ಕಾರ್ಯಕ್ರಮದ ಉದ್ದೇಶ :

ತೋಟಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ರೈತರು, ಅಧಿಕಾರಿಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳಿಗೆ ಇತ್ತೀಚಿನ ಎಲ್ಲಾ ತಾಂತ್ರಿಕ ಮತ್ತು ಯಾಂತ್ರಿಕ ಆವಿಷ್ಕಾರಗಳ ಬಗ್ಗೆ ಹೆಚ್ಚಿನ ಅರಿವು ಮತ್ತು ಜ್ಞಾನಾರ್ಜನೆ ನೀಡುವ ಮೂಲಕ ತೋಟಗಾರಿಕೆಯಲ್ಲಿ ಸರ್ವತೋಮುಖ ಅಭಿವೃದ್ಧಿಪಡಿಸುವುದು ಯೋಜನೆಯ ಮೂಲ ಉದ್ದೇಶವಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಸದರಿ ಯೋಜನೆಯಡಿ ರೈತರು, ಅಧಿಕಾರಿಗಳು, ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ಮತ್ತು ಅಧ್ಯಯನ ಪ್ರವಾಸಗಳನ್ನು ಏರ್ಪಡಿಸಲಾಗುತ್ತಿದೆ.

ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು ತಮ್ಮ ಜಿಲ್ಲೆಯಲ್ಲಿ ರೈತರಿಗೆ / ಆಧಿಕಾರಿಗಳಿಗೆ ಯಾವ ಯಾವ ಕ್ಷೇತ್ರದಲ್ಲಿ ತರಬೇತಿ ಕಾರ್ಯಕ್ರಮ / ಅಧ್ಯಯನ ಪ್ರವಾಸ ಏರ್ಪಡಿಸಬೇಕು ಎಂಬ ಬಗ್ಗೆ ಮೊದಲಿಗೆ ಗುರ್ತಿಸಿ, ನಿರ್ಧರಿಸಬೇಕಾಗಿರುತ್ತದೆ. ತಮ್ಮ ಜಿಲ್ಲೆಯ ಅಗತ್ಯಕ್ಕನುಗುಣವಾಗಿ ತರಬೇತಿಯನ್ನು ನೀಡಬೇಕಾಗಿರುತ್ತದೆ.

## 3. ಕಾರ್ಯಕ್ರಮದ ವಿವರಗಳು:

- ಆಯಾ ಜಿಲ್ಲೆಯ ರೈತರ ಬೇಡಿಕೆ ಮತ್ತು ಸ್ಥಳೀಯ ಭೌಗೋಳಿಕ ಅವಶ್ಯಕತೆಗೆ ಅನುಗುಣವಾಗಿ ಕ್ಷೇತ್ರಮಟ್ಟದ ತರಬೇತಿ ಕಾರ್ಯಕ್ರಮ / ಅಧ್ಯಯನ ಪ್ರವಾಸ ನಿಗದಿಪಡಿಸುವುದು.
- ರೈತರಿಗೆ, ಕ್ಷೇತ್ರಮಟ್ಟದ ಕಾರ್ಯಕರ್ತರಿಗೆ ಮತ್ತು ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮ / ಅಧ್ಯಯನ ಪ್ರವಾಸ ಏರ್ಪಡಿಸುವುದು.
- ಜಿಲ್ಲೆಯಲ್ಲಿ ಬೆಳೆಯುತ್ತಿರುವ ವಿವಿಧ ತೋಟಗಾರಿಕಾ ಬೆಳೆಗಳನ್ನು ಗಮನದಲ್ಲಿಟ್ಟುಕೊಂಡು ಇವುಗಳು ಬೆಳೆಯುವ ಹಂತದಿಂದ ಹಿಡಿದು ಕಟಾವಿನ ಹಂತದವರೆಗೆ (From planting harvesting and Post Harvest Management) ಮತ್ತು ಕೊಯ್ಲೋತ್ತರ ನಿರ್ವಹಣೆ ಬಗ್ಗೆ ಕಾಲಕಾಲಕ್ಕೆ ಅಗತ್ಯವಾದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಆಧುನಿಕ ಬೇಸಾಯ ಪದ್ಧತಿಗಳು.
- ಪ್ರಗತಿಪರ ರೈತರು ಅಳವಡಿಸಿಕೊಂಡಿರುವ ಸುಧಾರಿತ ಬೇಸಾಯ ಪದ್ದತಿಗಳು.
- ಅಧಿಕ ಇಳುವರಿ ನೀಡುವ ತಳಿಗಳ ಬಗ್ಗೆ.
- ಉತ್ಪಾದನೆ ಮತ್ತು ಉತ್ಪಾದಕತೆಯ ಬಗ್ಗೆ.
- ಸಮಗ್ರ ಪೋಷಕಾಂಶ ಮತ್ತು ನೀರು ನಿರ್ವಹಣೆ.
- ಕೀಟ ಮತ್ತು ರೋಗ ಹತೋಟಿ ಕ್ರಮಗಳು.
- ಕೊಯ್ಲೋತ್ತರ ನಿರ್ವಹಣೆಯ ಬಗ್ಗೆ.
- ಸಂಸ್ಕರಣ ಘಟಕಗಳು / Ripening Chambers / ಶೀಥಲೀಕರಣ ಘಟಕಗಳು.
- ಕಟಾವಿನ ಬಗ್ಗೆ- ಕಟಾವಿನ ನಂತರ ತೆಗೆದುಕೊಳ್ಳ ಬೇಕಾದ ಕ್ರಮಗಳ ಬಗ್ಗೆ.
- ಪ್ಯಾಕಿಂಗ್ ಮತ್ತು ಗ್ರೇಡಿಂಗ್.

- ಮಾರುಕಟ್ಟೆ ನಿರ್ವಹಣೆ.

ಮೇಲ್ಕಂಡ ತರಬೇತಿ / ಪ್ರವಾಸ ವಿಷಯಗಳ ಕುರಿತು ಕಾರ್ಯಕ್ರಮಗಳನ್ನು ರೂಪಿಸಬೇಕು.

**4. ಅನುದಾನ ಹಂಚಿಕೆ :**

**2014-15 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ನಿಗದಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಗಳು :**

**(ರೂ. ಲಕ್ಷಗಳಲ್ಲಿ)**

| ಕ್ರ.ಸಂ. | ವಿವರಗಳು | ಭೌತಿಕ | ಆರ್ಥಿಕ |
|---|---|---|---|
| | **ರೈತರಿಗೆ :** | | |
| | ರಾಜ್ಯದೊಳಗೆ ತರಬೇತಿ ಕಾರ್ಯಕ್ರಮ | **6062** | **57.12** |
| | ರಾಜ್ಯದ ಹೊರಗಡೆ ತರಬೇತಿ ಕಾರ್ಯಕ್ರಮ | **767** | **33.11** |
| | ರಾಜ್ಯದೊಳಗೆ ಅಧ್ಯಯನ ಪ್ರವಾಸ ಕಾರ್ಯಕ್ರಮ | **6676** | **126.29** |
| | ರಾಜ್ಯದ ಹೊರಗಡೆ ಅಧ್ಯಯನ ಪ್ರವಾಸ ಕಾರ್ಯಕ್ರಮ | **5181** | **196.33** |
| | ವಿದೇಶ ಅಧ್ಯಯನ ಪ್ರವಾಸ ಕಾರ್ಯಕ್ರಮ | **-** | **100.00** |
| | **ಒಟ್ಟು** | **18686** | **512.85** |
| | **ಅಧಿಕಾರಿಗಳಿಗೆ :** | | |
| 5 | ರಾಜ್ಯದೊಳಗೆ ಅಧ್ಯಯನ ಪ್ರವಾಸ ಕಾರ್ಯಕ್ರಮ | 154 | 1.33 |
| 6 | ರಾಜ್ಯದ ಹೊರಗಡೆ ಅಧ್ಯಯನ ಪ್ರವಾಸ ಕಾರ್ಯಕ್ರಮ | 366 | 7.83 |
| 7 | ವಿದೇಶ ಅಧ್ಯಯನ ಪ್ರವಾಸ ಕಾರ್ಯಕ್ರಮ | - | 100.00 |
| | **ಒಟ್ಟು** | **520** | **109.16** |

**5. ತಾಂತ್ರಿಕ ವೈಶಿಷ್ಟತೆಗಳು :**

**ಅ. ರೈತರಿಗೆ ತರಬೇತಿ :**

ತೋಟಗಾರಿಕೆ ಬೆಳೆಯಲ್ಲಿ ಇತ್ತೀಚಿನ ತಾಂತ್ರಿಕತೆ ಮತ್ತು ಹೊಸ ಆವಿಷ್ಕಾರಗಳ ಬಗ್ಗೆ ಮಾಹಿತಿ ಮತ್ತು ತರಬೇತಿ ನೀಡಿ ರಾಜ್ಯದಲ್ಲಿನ ತೋಟಗಾರಿಕೆ ಬೆಳೆಗಳ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸುವುದಕ್ಕಾಗಿ, ರೈತರಿಗೆ ರಾಜ್ಯದೊಳಗೆ ತರಬೇತಿ ಕಾರ್ಯಕ್ರಮಕ್ಕೆ ಭೌತಿಕ 6062 ಮತ್ತು ಆರ್ಥಿಕ ರೂ. 57.12 ಲಕ್ಷಗಳ ಗುರಿ ಇರುತ್ತದೆ.

ಸದರಿ ಕಾರ್ಯಕ್ರಮದಡಿ ತರಬೇತಿ ಕಾರ್ಯಕ್ರಮವನ್ನು ಕೈಗೊಳ್ಳಲು ಅವಕಾಶವಿದ್ದು, ಪ್ರತಿ ರೈತರಿಗೆ ಒಂದು ದಿವಸಕ್ಕೆ ಗರಿಷ್ಠ ರೂ. 1000/- ಗಳ ವೆಚ್ಚವನ್ನು (ಸಾರಿಗೆ ವೆಚ್ಚ ಸೇರಿ) ಭರಿಸಬಹುದಾಗಿರುತ್ತದೆ. ಪ್ರತಿ ರೈತರಿಗೆ ದಿನದ ವೆಚ್ಚ ಕಡಿಮೆಯಾದಲ್ಲಿ ಅದಕ್ಕೆ ಸೀಮಿತಗೊಳಿಸಿ ಭೌತಿಕ ಸಂಖ್ಯೆಯನ್ನು ಹೆಚ್ಚಿಸುವುದು.

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅಥವಾ ಇಲಾಖೆಯ ಇತರೆ ಯೋಜನೆಗಳಲ್ಲಿ ಉತ್ತಮ ರೀತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಿ ಅದರ ಉಪಯುಕ್ತತೆಯನ್ನು ಪಡೆದಂತಹ ಫಲಾನುಭವಿಗಳನ್ನು ಗುರ್ತಿಸಿ, ಅಂತಹವರನ್ನು ಪ್ರಗತಿಪರ ರೈತರು / ಸಂಪನ್ಮೂಲ ವ್ಯಕ್ತಿಗಳನ್ನಾಗಿ ಆಯ್ಕೆ ಮಾಡಬೇಕು.

ಜಿಲ್ಲೆಗೆ ನಿಗಧಿಯಾಗಿರುವ ಭೌತಿಕ ಹಾಗೂ ಆರ್ಥಿಕ ಗುರಿಗಳನ್ವಯ ಕನಿಷ್ಟ 50 ರೈತರ ಗುಂಪು ಮಾಡಿ ಮುಂಜಾನೆ 8.00 ಘಂಟೆಯಿಂದ ಸಾಯಂಕಾಲ 6.00 ಘಂಟೆಯವರೆಗೆ ಆಯ್ಕೆ ಮಾಡಿರುವ ಸಂಪನ್ಮೂಲ ವ್ಯಕ್ತಿಗಳ ಸ್ಥಳಗಳಿಗೆ ಪ್ರವಾಸವನ್ನು ಏರ್ಪಡಿಸಿ, ಪ್ರವಾಸದ ಅಂತ್ಯಕ್ಕೆ ಕನಿಷ್ಠ ಒಂದು ಘಂಟೆಯ ಕಾಲ ಸಂವಾದ ಕಾರ್ಯಕ್ರಮವನ್ನು ನಡೆಸಬೇಕು. ಈ ರೀತಿಯ ಕಾರ್ಯಕ್ರಮದಿಂದ ರೈತರಿಗೆ ಅರಿವು ಮೂಡಿಸಲು ಹಾಗೂ ಸ್ವಯಂಪ್ರೇರಿತರಾಗಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಅನುಕೂಲವಾಗುತ್ತದೆ.

- ತರಬೇತಿ ಕಾರ್ಯಕ್ರಮಕ್ಕೆ ಆಯ್ಕೆ ಮಾಡಿದ ಸ್ಥಳ, ರೈತರ ಹೆಸರು ಇತ್ಯಾದಿಗಳ ಬಗ್ಗೆ ವಿವರವಾದ ಮಾಹಿತಿಯನ್ನು KSHMA ಕಛೇರಿಗೆ ಕಡ್ಡಾಯವಾಗಿ ನೀಡುವುದು.

- ಫಲಾನುಭವಿಗಳನ್ನು ಆಯ್ಕೆ ಮಾಡಿ, ತರಬೇತಿ ನೀಡುವ ತಾತ್ಕಾಲಿಕ ದಿನಾಂಕಗಳನ್ನು ಮತ್ತು ಫಲಾನುಭವಿಗಳ ಯಾದಿ ಇತ್ಯಾದಿ ವಿವರಗಳನ್ನು KSHMA ಕಛೇರಿಗೆ ನೀಡಬೇಕು.
- ತರಬೇತಿ ನೀಡಲು- ಕೃಷಿ ವಿಜ್ಞಾನ ಕೇಂದ್ರ, ತೋಟಗಾರಿಕಾ ಕಾಲೇಜುಗಳು, ಸರ್ಕಾರೇತರ ಸಂಘ -ಸಂಸ್ಥೆಗಳು ಮತ್ತು ತಾಂತ್ರಿಕವಾಗಿ ನಿಪುಣರಾಗಿರುವ ನಿವೃತ್ತ ಇಲಾಖಾ ಅಧಿಕಾರಿಗಳು / ಪ್ರಾಧ್ಯಾಪಕರು, ಪ್ರಗತಿಪರ ರೈತರು, ತೋಟಗಾರಿಕೆ ವಿಷಯದಲ್ಲಿ ಪರಿಣಿತರಾದ ಯಾವುದೇ ಸಂಪನ್ಮೂಲ ವ್ಯಕ್ತಿಯನ್ನು ಆಯ್ಕೆ ಮಾಡಿ, ತರಬೇತಿ ನೀಡಲು ಇವರ ಸೇವೆಯನ್ನು ಪಡೆಯಬಹುದು. ಇವರಿಗೆ ಸಂಭಾವನೆ ಮತ್ತು ಪ್ರಯಾಣ ಭತ್ಯೆಗಳನ್ನು ನಿಯಮಗಳ ಪ್ರಕಾರ ಮಿಷನ್ ಮ್ಯಾನೇಜ್‌ಮೆಂಟ್ ಘಟಕದಡಿಯಲ್ಲಿ ಭರಿಸಬಹುದು.
- ತರಬೇತಿಯ ಅವಧಿಯಲ್ಲಿ - ತರಬೇತಿ ಪಡೆಯುವ ರೈತರಿಗೆ ತರಬೇತಿ ವಿಷಯಗಳ ಬಗ್ಗೆ ಲಿಖಿತವಾಗಿ ಕನ್ನಡ ಭಾಷೆಯಲ್ಲಿ ತಾಂತ್ರಿಕ ಮಾಹಿತಿ ಒದಗಿಸಬೇಕು.
- ಕ್ಷೇತ್ರ ಮಟ್ಟದಲ್ಲಿ ಜರುಗುವ ತರಬೇತಿಯ ನಂತರ ಪ್ರಗತಿಪರ ರೈತರ ತೋಟಗಳಿಗೆ ಭೇಟಿ ಮತ್ತು ಅವರೊಂದಿಗೆ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸುವುದು ಕಡ್ಡಾಯವಾಗಿರುತ್ತದೆ.
- ತರಬೇತಿ ಕಾರ್ಯಕ್ರಮದಲ್ಲಿ ಇಲಾಖೆಯಿಂದ ವಿವಿಧ ಬೆಳೆಗಳ ಬಗ್ಗೆ ತಯಾರಿಸಿರುವ Audio & Video Visuals ತೋರಿಸಬೇಕಾಗಿರುತ್ತದೆ. ಇವುಗಳನ್ನು ನಿರ್ದೇಶನಾಲಯದ ತೋಟಗಾರಿಕೆ ಮಾಹಿತಿ ಕೇಂದ್ರದಿಂದ (HIC) ಪಡೆಯಬಹುದು.
- ತರಬೇತಿ ಕಾರ್ಯಕ್ರಮದ ಉಪಯುಕ್ತತೆ ಬಗ್ಗೆ ರೈತರ ಅನಿಸಿಕೆಗಳನ್ನು ಕಡ್ಡಾಯವಾಗಿ Register ನಲ್ಲಿ ದಾಖಲಿಸಿಕೊಳ್ಳತಕ್ಕದ್ದು.
- ತರಬೇತಿ ಕಾರ್ಯಕ್ರಮದ ಛಾಯಚಿತ್ರಗಳನ್ನು ತೆಗೆದು ದಾಖಲಿಸುವುದು ಕಡ್ಡಾಯವಾಗಿರುತ್ತದೆ.

ತಾಲ್ಲೂಕು ಮಟ್ಟದ ಅಧಿಕಾರಿಗಳು ಆದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ರೈತರೊಂದಿಗೆ ಸಂವಾದ ನಡೆಸಬೇಕು. ಇದರಿಂದ ತಾಲ್ಲೂಕಿನ ತೋಟಗಾರಿಕೆ ಬೆಳೆಗಳನ್ನು ಬೆಳೆಯುವಲ್ಲಿ ಆಗುವ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಿದಂತಾಗುತ್ತದೆ.

ತರಬೇತಿ ಕಾರ್ಯಕ್ರಮದ ಪೂರ್ಣ ಜವಾಬ್ದಾರಿಯು ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಗಳದ್ದೇ ಆಗಿರುತ್ತದೆ. ತೋಟಗಾರಿಕೆ ಉಪ ನಿರ್ದೇಶಕರು ಮಂಜೂರಾತಿಯನ್ನು ನೀಡುವ ಸಕ್ಷಮ ಪ್ರಾಧಿಕಾರ ಹೊಂದಿರುತ್ತಾರೆ.

**ಆ. <u>ರೈತರಿಗೆ / ಅಧಿಕಾರಿಗಳಿಗೆ ಪ್ರವಾಸ ಕಾರ್ಯಕ್ರಮ ( Exposure Visit to Farmers) :</u>**

- ರಾಜ್ಯದ ಒಳಗಡೆ ಮತ್ತು ಹೊರಗಡೆ ರೈತರಿಗೆ ಪ್ರವಾಸ ಏರ್ಪಡಿಸುವ ಮುನ್ನ ಸಂಬಂಧಿಸಿದ ಜಿಲ್ಲಾ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಸೂಕ್ತ ಸ್ಥಳಗಳನ್ನು ಗುರುತಿಸಿ, ವೇಳಾಪಟ್ಟಿ ಸಿದ್ಧಪಡಿಸಬೇಕು. ಪ್ರವಾಸದ ಸಮಯದಲ್ಲಿ ಪ್ರತಿಯೊಂದು ಪ್ರವಾಸಕ್ಕೆ ಕನಿಷ್ಠ 45 ರಿಂದ 50 ಜನ ಅಥವಾ ಒಂದು ಬಸ್ ತುಂಬುವಂತೆ ರೈತರನ್ನು ಆಯ್ಕೆ ಮಾಡಬೇಕು.
- ಅಧಿಕ ಇಳುವರಿ ನೀಡುವ ವಿವಿಧ ತೋಟಗಾರಿಕಾ ಬೆಳೆಗಳನ್ನು ಬೆಳೆಯುವ ಬಗ್ಗೆ, ಅವುಗಳ ಉತ್ಪಾದನೆ, ಉತ್ಪಾದಕತೆ, ಸಂಸ್ಕರಣೆಗೆ ಗುರುತಿಸಿರುವ ತಳಿಗಳ ಬಗ್ಗೆ ಮಾಹಿತಿ ನೀಡಬೇಕು.
- ಸಂರಕ್ಷಿತ ಬೇಸಾಯ ಪದ್ಧತಿ, ಪ್ಯಾಕಿಂಗ್, ಗ್ರೇಡಿಂಗ್, ಸಂಸ್ಕರಣೆ ಇತ್ಯಾದಿಗಳ ಬಗ್ಗೆ ಜ್ಞಾನಾರ್ಜನೆ ಮೂಡಿಸಲು ರೈತರನ್ನು ಜಿಲ್ಲೆಯ ಒಳಗೆ / ರಾಜ್ಯದ ಒಳಗೆ ಮತ್ತು ರಾಜ್ಯದ ಹೊರಗೆ ಅಧ್ಯಯನ ಪ್ರವಾಸ ಏರ್ಪಡಿಸಬೇಕು.

**ಇ. ರೈತರು / ಅಧಿಕಾರಿಗಳ ವಿದೇಶ ಅಧ್ಯಯನ ಪ್ರವಾಸ :**

ತೋಟಗಾರಿಕೆ ಮತ್ತು ಕೃಷಿ ಕ್ಷೇತ್ರದಲ್ಲಿ ಆಗಿರುವ ಉನ್ನತ ತಾಂತ್ರಿಕತೆಗಳು, ವಿವಿಧ ಹಣ್ಣಿನ ಬೆಳೆಗಳ ಬೇಸಾಯ ಪದ್ಧತಿ, ಹಣ್ಣಿನ ತೋಟಗಳ ಪುನ:ಶ್ಚೇತನ, ಸಂರಕ್ಷಿತ ಬೇಸಾಯ, ಹನಿ ನೀರಾವರಿ, ಉತ್ಪಾದನೆ, ಉತ್ಪಾದಕತೆ, ಕೊಯ್ಲೋತ್ತರ ನಿರ್ವಹಣೆ, ಸಂಸ್ಕರಣೆ ಮತ್ತು ಮಾರುಕಟ್ಟೆ ಕುರಿತು ಇರುವ ವಿಫುಲ ಅವಕಾಶಗಳನ್ನು ಅರಿಯಲು ಹಾಗೂ ವೈಜ್ಞಾನಿಕವಾಗಿ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳನ್ನು ಗುರ್ತಿಸಿ, ವಿದೇಶ ಅಧ್ಯಯನ ಪ್ರವಾಸ ಕೈಗೊಳ್ಳಲಾಗುವುದು.

**ಪ್ರವಾಸದ ಅವಧಿ :**

- ಜಿಲ್ಲೆಯೊಳಗೆ - ಒಂದು ದಿನದ ತರಬೇತಿ ಕಾರ್ಯಕ್ರಮ
- ರಾಜ್ಯದ ಒಳಗೆ - ಕನಿಷ್ಠ 3 ರಿಂದ ಗರಿಷ್ಠ 5 ದಿವಸಗಳ ಪ್ರವಾಸ
- ರಾಜ್ಯದ ಹೊರಗಡೆ - ಕನಿಷ್ಠ 3 ರಿಂದ ಗರಿಷ್ಠ 5 ದಿವಸಗಳು.

**ರೈತರಿಗೆ ಪ್ರವಾಸದ ಕಾರ್ಯಕ್ರಮದ ಭತ್ಯೆ :**

- ಒಳರಾಜ್ಯ ತರಬೇತಿ ಪ್ರವಾಸ ಕಾರ್ಯಕ್ರಮಕ್ಕೆ - ಪ್ರತಿ ರೈತರಿಗೆ ಒಂದು ದಿನಕ್ಕೆ ರೂ. 1000/-
- ಹೊರರಾಜ್ಯ ತರಬೇತಿ ಪ್ರವಾಸ ಕಾರ್ಯಕ್ರಮಕ್ಕೆ - ಪ್ರತಿ ರೈತರಿಗೆ ಒಂದು ದಿನಕ್ಕೆ ರೂ. 1500/-
- ಒಳರಾಜ್ಯ ಅಧ್ಯಯನ ಪ್ರವಾಸ ಕಾರ್ಯಕ್ರಮಕ್ಕೆ - ಪ್ರತಿ ರೈತರಿಗೆ ಒಂದು ದಿನಕ್ಕೆ ರೂ. 1000/- ಗರಿಷ್ಠ 5 ದಿವಸ
- ಹೊರರಾಜ್ಯ ಅಧ್ಯಯನ ಪ್ರವಾಸ ಕಾರ್ಯಕ್ರಮಕ್ಕೆ - ಪ್ರತಿ ರೈತರಿಗೆ ಒಂದು ದಿನಕ್ಕೆರೂ. 1500/- ಗರಿಷ್ಠ 5 ದಿವಸ

**ಅಧಿಕಾರಿಗಳಿಗೆ ಪ್ರವಾಸದ ಕಾರ್ಯಕ್ರಮದ ಭತ್ಯೆ :**

- ಒಳರಾಜ್ಯ ಅಧ್ಯಯನ ಪ್ರವಾಸ ಕಾರ್ಯಕ್ರಮಕ್ಕೆ - ಪ್ರತಿ ಅಧಿಕಾರಿಗೆ ಒಂದು ದಿನಕ್ಕೆ ರೂ. 300/-
- ಹೊರರಾಜ್ಯ ಅಧ್ಯಯನ ಪ್ರವಾಸ ಕಾರ್ಯಕ್ರಮಕ್ಕೆ - ಪ್ರತಿ ಅಧಿಕಾರಿಗೆ ಒಂದು ದಿನಕ್ಕೆ ರೂ. 800/-

ಮೇಲ್ಕಂಡ ವಿಷಯಗಳ ಬಗ್ಗೆ ಪ್ರವಾಸ ಕಾರ್ಯಕ್ರಮವನ್ನು ರೂಪಿಸಿ ಅನುಷ್ಠಾನಗೊಳಿಸಬೇಕಾಗಿರುತ್ತದೆ.

**ರಾಜ್ಯದ ಒಳಗಡೆ ಮತ್ತು ಹೊರಗಡೆ ರೈತರು ಮತ್ತು ಅಧಿಕಾರಿಗಳು ಪ್ರವಾಸ ಕೈಗೊಳ್ಳಲು KSHMA ಕಛೇರಿಯಿಂದ ಮಂಜೂರಾತಿ ಪಡೆಯಲು ಈ ಕೆಳಕಂಡ ವಿವರಗಳನ್ನು ಒದಗಿಸಬೇಕು.**

- ➢ ಉದ್ದೇಶಿತ ಪ್ರವಾಸದ ದಿನಾಂಕಗಳು
- ➢ ಉದ್ದೇಶಿತ ಪ್ರವಾಸದ ಸ್ಥಳಗಳ ಮತ್ತು ರೈತರ ವಿವರಗಳು
- ➢ ಸಂಪನ್ಮೂಲ ವ್ಯಕ್ತಿಗಳು, ಅವರ ವಿಳಾಸ ಮತ್ತು ದೂರವಾಣಿ ಸಂಖ್ಯೆ ಹಾಗೂ ಆಯ್ಕೆ ಮಾಡಿದ ಸ್ಥಳಗಳಲ್ಲಿ ರೈತರಿಗೆ ಯಾವ ವಿಷಯದ ಬಗ್ಗೆ ಮಾಹಿತಿ ನೀಡಲಾಗುವುದು ಎಂಬುದರ ಬಗ್ಗೆ ವಿವರಗಳು.
- ➢ ರೈತರೊಂದಿಗೆ ನಿಯೋಜಿಸಲಾಗುವ ಅಧಿಕಾರಿಗಳ ಹೆಸರು ಮತ್ತು ದೂರವಾಣಿ ಸಂಖ್ಯೆಯ ವಿವರಗಳು.

- ಜಿಲ್ಲಾ ತೋಟಗಾರಿಕೆ ಉಪ ನಿರ್ದೇಶಕರು ಪ್ರವಾಸ ಕಾರ್ಯಕ್ರಮಕ್ಕೆ ನಿಯೋಜಿಸಿದ ಅಧಿಕಾರಿಯವರು ಉದ್ದೇಶಿತ ಸ್ಥಳಗಳ ಸಂಪನ್ಮೂಲ ವ್ಯಕ್ತಿಗಳನ್ನು ಸತತವಾಗಿ ಸಂಪರ್ಕಿಸಿ ಅವರಿಂದ ಒಪ್ಪಿಗೆ ಪಡೆದು, ಪ್ರವಾಸ ದಿನಾಂಕ ನಿಗಧಿಪಡಿಸಬೇಕು ಹಾಗೂ ರೈತರ ವಸತಿಯ ಬಗ್ಗೆಯೂ ಸಹ ಕ್ರಮ ವಹಿಸಬೇಕು.
- ಪ್ರವಾಸದ ಸಮಯದಲ್ಲಿ ಭೇಟಿ ನೀಡುವ ಸ್ಥಳಗಳಲ್ಲಿ ಪ್ರತಿಯೊಂದು ಕ್ಷೇತ್ರದ ಛಾಯಚಿತ್ರಗಳನ್ನು ತೆಗೆದು ಕಡತಗಳಲ್ಲಿ ದಾಖಲಿಸಬೇಕು.
- ಪ್ರವಾಸದ ನಂತರ ಪ್ರತಿಯೊಬ್ಬ ರೈತರ ಅನಿಸಿಕೆ ಹಾಗೂ ಪ್ರವಾಸದ ಉಪಯುಕ್ತತೆಗಳ ಬಗ್ಗೆ Register ನಲ್ಲಿ ದಾಖಲಿಸುವುದು ಕಡ್ಡಾಯವಾಗಿರುತ್ತದೆ.

ಮೇಲಿನ ಎಲ್ಲಾ ವಿವರಗಳನ್ನು KSHMA ಕಛೇರಿಗೆ ಸಲ್ಲಿಸಿ, ಕಾರ್ಯನಿರ್ವಾಹಕ ನಿರ್ದೇಶಕರು / ಮಿಷನ್ ನಿರ್ದೇಶಕರವರಿಂದ ಮಂಜೂರಾತಿ ಪಡೆದ ನಂತರವೇ ಪ್ರವಾಸವನ್ನು ಕೈಗೊಳ್ಳಬೇಕಾಗಿರುತ್ತದೆ.

6. ಫಲಾನುಭವಿಗಳ ಅರ್ಹತೆ :

- ರೈತ ಫಲಾನುಭವಿಗಳು ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಾಗಿರಬೇಕು ಅಥವಾ ತೋಟಗಾರಿಕೆ ಬೆಳೆ ಬೆಳೆಯುವ ಆಸಕ್ತಿ ಹೊಂದಿರಬೇಕು.
- ಎಲ್ಲಾ ವರ್ಗದ ಫಲಾನುಭವಿಗಳು ಅಂದರೆ ಸಾಮಾನ್ಯ, ಪರಿಶಿಷ್ಟ ಜಾತಿ , ಪರಿಶಿಷ್ಟ ಪಂಗಡ / ಸಣ್ಣ ಹಾಗೂ ಅತೀ ಸಣ್ಣ ರೈತರು ಹಾಗೂ ರೈತ ಮಹಿಳೆಯರು ತರಬೇತಿ / ಪ್ರವಾಸ ಕಾರ್ಯಕ್ರಮದಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

<u>ವಿದೇಶ ಅಧ್ಯಯನ ಪ್ರವಾಸಕ್ಕೆ ರೈತ ಫಲಾನುಭವಿಗಳ ಆಯ್ಕೆ:-</u>

ರೈತರನ್ನು ವಿದೇಶ ಅಧ್ಯಯನ ಪ್ರವಾಸಕ್ಕೆ ಆಯ್ಕೆ ಮಾಡುವ ಪೂರ್ವದಲ್ಲಿ ಈ ಕೆಳಕಂಡ ಅಂಶಗಳನ್ನು ಹಾಗೂ ನಿರ್ದೇಶನಾಲಯದಿಂದ ಕಾಲಕಾಲಕ್ಕೆ ನೀಡುವ ಮಾರ್ಗಸೂಚಿಯನ್ವಯ ಗಣನೆಗೆ ತೆಗೆದುಕೊಳ್ಳಬೇಕು.

- ಜಿಲ್ಲೆಗೆ ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಗಳನ್ನು ಜಿಲ್ಲಾ ಸಮಿತಿಯ ಗಮನಕ್ಕೆ ತಂದು, ಜಿಲ್ಲಾ ಸಮಿತಿ ಮುಖಾಂತರ ಫಲಾನುಭವಿಯ ಆಯ್ಕೆ ಮಾಡಿ, ತೋಟಗಾರಿಕೆ ಉಪ ನಿರ್ದೇಶಕರ ಶಿಫಾರಸ್ಸಿನೊಂದಿಗೆ ರೈತರ ಹೆಸರು, ವಿಳಾಸ, ಬೆಳೆಯುತ್ತಿರುವ ತೋಟಗಾರಿಕೆ ಬೆಳೆಗಳು, ಜಮೀನಿನ ಸರ್ವೆ ನಂ, ಹುಟ್ಟಿದ ದಿನಾಂಕ, ವಯಸ್ಸು, ವಿದ್ಯಾರ್ಹತೆ ಮತ್ತು ಪಾಸ್‌ಪೋರ್ಟ್ ವಿವರಗಳನ್ನು KSHMA ಕಛೇರಿಗೆ ಸಲ್ಲಿಸಬೇಕು.
- ವಿದೇಶ ಪ್ರವಾಸಕ್ಕೆ ಶಿಫಾರಸ್ಸು ಮಾಡುವ ರೈತರು ಸ್ವತಃ ಕೃಷಿಕರಾಗಿದ್ದು, ತೋಟಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರಬೇಕು.
- ತೋಟಗಾರಿಕೆ ಬೆಳೆಗಳ ಕೃಷಿಕರಾಗಿರುವುದಕ್ಕೆ ಸಮರ್ಥನೆಯಾಗಿ ಅವರ ಹೆಸರಿನಲ್ಲಿರುವ ಪಹಣಿ / land records ದಾಖಲಾತಿಗಳನ್ನು ಒದಗಿಸಬೇಕು.
- ಆಯ್ಕೆಗೆ ಪರಿಗಣಿಸುವ ರೈತ ಫಲಾನುಭವಿಯ ವಯೋಮಿತಿ ಕನಿಷ್ಠ 25 ಕ್ಕಿಂತ ಕಡಿಮೆ ಹಾಗೂ ಗರಿಷ್ಠ 60 ವರ್ಷಗಳು ಮೀರಿರಬಾರದು.
- ಕನಿಷ್ಠ ವಿದ್ಯಾರ್ಹತೆ S.S.L.C ಇರಬೇಕು ಹಾಗೂ ಆಂಗ್ಲಭಾಷೆಯನ್ನು ಅರ್ಥ ಮಾಡಿಕೊಳ್ಳುವವರಾಗಿ ಇರಬೇಕು.
- ತೋಟಗಾರಿಕೆಯ ಆವಿಷ್ಕಾರಗಳನ್ನು ಬಲ್ಲವರಾಗಿದ್ದು, ನೂತನ ತಂತ್ರಜ್ಞಾನಗಳನ್ನು ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡಿರಬೇಕು ಅಥವಾ ಅಳವಡಿಸಿಕೊಳ್ಳಲು ಆಸಕ್ತರಿರಬೇಕು.
- ತೋಟಗಾರಿಕೆ ಇಲಾಖೆ, ಕೃಷಿ ವಿಶ್ವ ವಿದ್ಯಾನಿಲಯ, ತೋಟಗಾರಿಕೆ ವಿಶ್ವ ವಿದ್ಯಾನಿಲಯ, ಕೃಷಿ ವಿಜ್ಞಾನ ಕೇಂದ್ರ, ಸಂಶೋಧನಾ ಸಂಸ್ಥೆಗಳು ಹಾಗೂ ತೋಟಗಾರಿಕೆಗೆ ಸಂಬಂಧಿಸಿದ ಇತರ ಸಂಘ-ಸಂಸ್ಥೆಗಳು ನಡೆಸುವ ವಿಚಾರ ಸಂಕಿರಣಗಳು, ರೈತರ / ಕೃಷಿ / ತೋಟಗಾರಿಕೆ ಮೇಳ, ಪ್ರದರ್ಶನ, ಕಾರ್ಯಾಗಾರ ಇತ್ಯಾದಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿರುವ ರೈತರಿಗೆ ಆದ್ಯತೆ ನೀಡಬೇಕು.
- ತೋಟಗಾರಿಕೆ ಸಂಬಂಧಿತ ಸಂಘ - ಸಂಸ್ಥೆಗಳ ಸದಸ್ಯತ್ವ ಹೊಂದಿದ್ದರೆ ಅಪೇಕ್ಷಣೀಯ.
- ಅಭ್ಯರ್ಥಿಗಳು ಆರೋಗ್ಯವಂತರಾಗಿರಬೇಕು. ಯಾವುದೇ ತೀವ್ರತರ ಅನಾರೋಗ್ಯ / ವಾಸಿಯಾಗದ ಖಾಯಿಲೆಯಿಂದ ಬಳಲುತ್ತಿರಬಾರದು.
- ಅಭ್ಯರ್ಥಿಯು ಯಾವುದೇ ನಿಷೇಧಿತ ಸಂಘ ಸಂಸ್ಥೆಗಳ ಸದಸ್ಯರಾಗಿದ್ದಲ್ಲಿ ಅಥವಾ ಯಾವುದೇ ಕ್ರಿಮಿನಲ್ ಕೃತ್ಯಗಳಲ್ಲಿ ಭಾಗಿಯಾಗಿದ್ದಲ್ಲಿ ಮತ್ತು ದೇಶ ದ್ರೋಹ ಚಟುವಟಿಕೆಗಳಲ್ಲಿ ನೇರವಾಗಿ / ಪರೋಕ್ಷವಾಗಿ ಪಾತ್ರ ಹೊಂದಿದ್ದಲ್ಲಿ ಅವರನ್ನು ಪರಿಗಣಿಸುವಂತಿಲ್ಲ.
- ಹಿಂದೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಬೇರೆ ಬೇರೆ ಇಲಾಖೆ / ಮಂಡಳಿ / ಫೆಡರೇಷನ್‌ನಿಂದ ಯಾವುದೇ ಸರ್ಕಾರಿ ಪ್ರಾಯೋಜಿತ ವಿದೇಶ ಅಧ್ಯಯನ ಪ್ರವಾಸ ಕೈಗೊಂಡಿದ್ದಲ್ಲಿ ಅವರನ್ನು ಮತ್ತೆ ಈ ವಿದೇಶ ಪ್ರವಾಸಕ್ಕೆ ಶಿಫಾರಸ್ಸು ಮಾಡುವಂತಿಲ್ಲ.
- ಜಿಲ್ಲೆಯಿಂದ ಶಿಫಾರಸ್ಸು ಮಾಡುವ ರೈತರ ಪಟ್ಟಿಗೆ ಅಂತಿಮವಾಗಿ ಸರ್ಕಾರದಿಂದ ಅನುಮೋದನೆ ಆಗಬೇಕಾಗಿದ್ದು ಸರ್ಕಾರದಿಂದ ಅನುಮೋದನೆ ಆಗುವವರೆಗೆ ರೈತರ ಪಾಲಿನ ವಂತಿಗೆಯನ್ನು ಸ್ವೀಕರಿಸಬಾರದು.

- ಸರ್ಕಾರದಿಂದ ಆಯ್ಕೆಯಾದ ರೈತರು ಪ್ರವಾಸಕ್ಕೆ ಹೊರಡುವ ಮುನ್ನ ನಿಗಧಿಪಡಿಸಿದ ವಂತಿಗೆ ಹಣವನ್ನು ಪಾವತಿಸಬೇಕಾಗುತ್ತದೆ. ರೈತರ ವಂತಿಗೆ ಹಣವನ್ನು ಅವರ ಪ್ರವಾಸದ ವೆಚ್ಚಕ್ಕೆ ಸರಿದೂಗಿಸಲಾಗುವುದು.
- ಆಯ್ಕೆ ಮಾಡುವಂತಹ ರೈತರು ಕಡ್ಡಾಯವಾಗಿ ಕನಿಷ್ಠ 6 ತಿಂಗಳ validity ಇರುವ ಪಾಸ್‌ಪೋರ್ಟ್‌ನ್ನು ಹೊಂದಿರಬೇಕು.

**ವಿದೇಶ ಅಧ್ಯಯನ ಪ್ರವಾಸಕ್ಕೆ ಅರ್ಜಿ ಸಲ್ಲಿಸುವ ಅಧಿಕಾರಿಗಳ ಆಯ್ಕೆ ಪ್ರಕ್ರಿಯೆ :**

- ಖಾಯಂ ಪೂರ್ವ ಸೇವಾವಧಿ ತೃಪ್ತಿಕರವಾಗಿ ಪೂರ್ಣಗೊಂಡಿರಬೇಕು.
- ಕನಿಷ್ಠ 5 ವರ್ಷಗಳ ಕಾಲ ಇಲಾಖೆಯಲ್ಲಿ ಸೇವೆ ಸಲ್ಲಿಸಿರಬೇಕು.
- ಇಲಾಖೆಯಲ್ಲಿ ಯಾವುದೇ ಶಿಸ್ತುಕ್ರಮ ಬಾಕಿ ಇರಬಾರದು.
- ಕನಿಷ್ಠ 6 ತಿಂಗಳ validity ಇರುವ ಪಾಸ್‌ಪೋರ್ಟ್‌ನ್ನು ಹೊಂದಿರಬೇಕು.

## 7. ಆರ್ಥಿಕ ಪ್ರತ್ಯಾಯೋಜನೆ ( Delegation of Power) :

ಈ ಯೋಜನೆಯಡಿ ಸರ್ಕಾರದ ಮಾರ್ಗಸೂಚಿಯಂತೆ ಒಳ ಮತ್ತು ಹೊರರಾಜ್ಯ ಪ್ರವಾಸ ಕಾರ್ಯಕ್ರಮವನ್ನು ಮಂಜೂರು ಮಾಡಲು ಕಾರ್ಯನಿರ್ವಾಹಕ ನಿರ್ದೇಶಕರು / ಮಿಷನ್ ನಿರ್ದೇಶಕರು, ವಿದೇಶ ಅಧ್ಯಯನ ಪ್ರವಾಸ ಕಾರ್ಯಕ್ರಮವನ್ನು ಮಂಜೂರು ಮಾಡಲು ಸರ್ಕಾರದ ಅನುಮೋದನೆ ದೊರಕಿದ ನಂತರ ಮಿಷನ್ ನಿರ್ದೇಶಕರು ಸಕ್ಷಮ ಪ್ರಾಧಿಕಾರವನ್ನು ಹೊಂದಿರುತ್ತಾರೆ.

## 8. ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು ( Reporting and documentation)

- ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗಿರುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ದಾಖಲಿಸಿ ಇವುಗಳ ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯನ್ನು **ಕ.ರಾ.ತೋ.ಮಿ.ಏ. ಬೆಂಗಳೂರು** ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ತೋಟಗಾರಿಕೆ ಮಾಹಿತಿ ಕೇಂದ್ರ) ರವರಿಗೆ ಕಳುಹಿಸುವುದು.

ಮುಂದಿನ ಅದೇಶದವರೆಗೂ ಈ ಮಾರ್ಗಸೂಚಿಯು ಚಾಲ್ತಿಯಲ್ಲಿರುತ್ತದೆ.